

ತ್ರಿಕಾಲಜ್ಞಾನಿಯಂತೆ ತಮಗೆಲ್ಲ ಗೊತ್ತಾಗಿಬಿಟ್ಟಿತೆಂಬಂತೆ ಮಾತಾಡಲು ಅವಕಾಶವನ್ನೇ ನೀಡದೇ, 'ಇಲ್ಲೇ ಮನೆ ಮಾಡಿದ್ದೀರಂತಲ್ಲ, ಹೇಗೂ ದಿನಾ ಸಿಕ್ತೀರ ಬಿಡಿ, ಅಭಿಪ್ರಾಯ ಹಂಚಿಕೊಳ್ಳಬಹುದು..' ಎಂದು ಇನ್‌ಸ್ಟಾಲ್‌ಮೆಂಟ್‌ನಲ್ಲಿ ಮಾತನಾಡುವವರಂತೆ, ಇನ್ನೇನೋ ಘನಂದಾರಿ ಕೆಲಸ ಬಿಟ್ಟು ಬಂದಿರುವವರಂತೆ ಅವಸರದ ಕುದುರೆಯನ್ನೇರಿ ಹೊರಟೇಬಿಟ್ಟರು..

ಮನೆಗೆ ಬರುತ್ತಿದ್ದಂತೆಯೇ ಆಳುಮಗ ಮಲ್ಲೇಶಿ ಅಬ್ಬೇಪಾರಿ ಕೋತಿಗಳ ಹಿಂಡು ತೋಟಕ್ಕೆ ದಾಳಿಯಿಟ್ಟಿದೆ ಎಂದು ಸುದ್ದಿ ತಂದ. ಗಾಬರಿಬಿದ್ದು ತೋಟದತ್ತ ಓಡಿದರು ಪಾವಂದಯ್ಯ. ನೋಡಿದರೆ ಒಂದೆರಡಲ್ಲ.. ಇಪ್ಪತ್ತೈದು ಮೂವತ್ತು ಮಂಗಗಳ ಹಿಂಡೇ ಬಂದುಬಿಟ್ಟದೆ. ಆಳನ್ನು ಕೇರುಮಾಡದ ಮಂಗಗಳು ಪ್ಯಾಂಟುಷರಟಿನ ಓನರನ್ನು ನೋಡುತ್ತಿದ್ದಂತೆಯೇ ಮಂಗಮಾಯವಾಗಿಬಿಟ್ಟವು. ಈಗ ತಾನೇ ಕಾಣುತ್ತಿದ್ದವುಗಳು ಇಷ್ಟು ಬೇಗ ಎಲ್ಲಿ ತಪ್ಪಿಸಿಕೊಂಡು ಹೋದವು ಎಂದು ಆಶ್ಚರ್ಯದಿಂದ ನೋಡಿದವರ ಕಣ್ಣಿಗೆ ಮಂಗವಿರಲಿ ಅವುಗಳ ಬಾಲವೂ ಕಾಣಲಿಲ್ಲ. 'ನೋಡೋ ಮಲ್ಲೇಶಿ ನನ್ನ ಪವರ್ರು... ನಿನಗೆ ಕೇರು ಮಾಡದೇ ಇದ್ದವು, ನನ್ನ ನೆರಳು ಕಾಣುತ್ತಿದ್ದಂಗೆ ಹೆಂಗೆ ಬಾಲ ಮುದುರ್ಕಂಡೋದ್ದೋ...' ಎಂದು ಚಂಗಿಸಿ ಮಾತಾಡಿದರು. ಮಲ್ಲೇಶಿ, 'ಎರ್‍ಡ್ ದಿನ ಇರ್ರೀ ಸ್ವಾಮೀ, ಹೆಂಗೆ ನಿಮ್ಗೇ ಫ್ರೆಂಡಾಯ್ತವೆ, ನೋಡೀವ್ರಂತೆ...' ಎಂದು ಕೇಳಿಸಿಯೂ ಕೇಳಿಸದಂತೆ ಮಾತಿನ ಬಾಣಬಿಟ್ಟ. ತೆಂಗಿನಗರಿ, ಅಡಕೆಗೊನೆಗಳ ಮರೆಯೇ ಹಿಡಿಮೈಯ್ಯನ್ನು ಅಡಗಿಸಿಕೊಂಡಿದ್ದ ಅವು, ಪಾವಂದಯ್ಯನೇನೂ ಲಂಕೇಶನಲ್ಲ ಎಂಬುದನ್ನರಿತು ಒಂದೊಂದಾಗಿ ಬಾಲಬಿಚ್ಚಲಾರಂಭಿಸಿದವು. ಮಿಳ್ಳೆ, ಗೋಟುಗಳು ಆತನ ತಲೆಯ ಮೇಲೇ ಬೀಳಲಾರಂಭಿಸಿದಾಗ ಸಿಟ್ಟು ನೆತ್ತಿಗೇರಿತು. ಕುರ್ರೋ ಕುರ್ರೋ ಎಂದು ನಾಯಿಯನ್ನು ಕರೆದು ಛೂಬಿಟ್ಟರು. ಅದು ಸರ್ರನೆ ಓಡಿಬಂದು ಅಡರುಗಾಲಲ್ಲಿ ಬ್ರೇಕು ಹಾಕಿದ ಸ್ಪೀಡಿಗೆ ಮರ ಹತ್ತಿಯೇ ಬಿಟ್ಟಿತೇನೋ ಎಂಬಂತೆ ಭೀತಿಯಿಂದ ಕಿರ್ರೋ ಮರ್ರೋ ಎಂದು ಕಿರುಚಿದವು. ಕೆಲವೇ ನಿಮಿಷಗಳಲ್ಲಿ ಎಷ್ಟಾದರೂ ನಾಯಿ ಬೊಗಳಬಹುದಷ್ಟೇ, ಮರ ಹತ್ತಲಾದೀತೇ ಎಂದು ಪರಿಸ್ಥಿತಿಯ ಅರ್ಥ ಮಾಡಿಕೊಂಡು ಸುಮ್ಮನಾದವು. ಒಂದೊಂದೇ ಈಚು, ಗೋಟು ಕವರಲಾರಂಭಿಸಿದವು..

ಪಾವಂದಯ್ಯ ಕಲ್ಲು ತೆಗೆದುಕೊಂಡು ಗುರಿಯಿಟ್ಟು ಹೊಡೆದರೂ ಒಂದಕ್ಕೂ ಏಟು ಬೀಳದೇ, ಬೊಡ್ಡೆಗೆ ಬಿದ್ದ ಕಲ್ಲುಗಳು ತಿರುಗಿ ಇವರತ್ತಲೇ ಬರುತ್ತಿದ್ದುದರಿಂದ ಎಸೆಯುವ ಮೊದಲೇ ವಾಪಾಸು ಬರುವುದನ್ನು ನಿರೀಕ್ಷಿಸಿ ಎಸೆಯಬೇಕಾಗಿತ್ತು. ಹೊಡೆದೂ ಹೊಡೆದೂ ಕೈನೋವು